# ACADEMIC MASTER PLAN 2025-2026

## ಸರಕಾರಿ ಉನ್ನತ ಪ್ರೌಢಶಾಲೆ ಪೈವಳಿಕೆ ಕಾಯರ್ ಕಟ್ಟೆ

GHSS PAIVALIKE

*ಗಡಿನಾಡು ಕಾಸರಗೋಡಿನ ಅತ್ಯಂತ ಹಳೆಯ ಕನ್ನಡ ಮಾಧ್ಯಮ ಸರಕಾರಿ ಶಾಲೆ ನಮ್ಮದು. ಹಳೆಯ ಕಾಲಕ್ಕಿಂತಲೂ ವಿದ್ಯಾರ್ಥಿಗಳ ಸಂಖ್ಯೆ ಇದೀಗ ಕಡಿಮೆಯಾದರೂ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಉತ್ತಮ ಪರೀಕ್ಷಾ ಫಲಿತಾಂಶ ಹಾಗೂ ವಿದ್ಯಾರ್ಥಿ ಶಿಸ್ತಿನ ಮೂಲಕ ಒಳ್ಳೆಯ ರೀತಿಯಲ್ಲಿ ಶಾಲೆ ಮುನ್ನಡೆಯುತ್ತಾ ಬಂದಿದೆ. 2025-26 ಶೈಕ್ಷಣಿಕ ವರ್ಷದಲ್ಲಿ ಶಾಲೆಯ ಶೈಕ್ಷಣಿಕ ಸಾಧನೆ ಹಾಗೂ ಮಕ್ಕಳ ಪಠ್ಯೇತರ ಚಟುವಟಿಕೆಗಳು ಉತ್ತಮ ಪಡಿಸಿಕೊಂಡು ಶಾಲೆಯನ್ನು ಮುಂದೆಕೊಂಡು ಹೋಗಬೇಕು ಎಂಬುದು ನಮ್ಮ ಇರಾದೆ. ಜನರ ಸಹಭಾಗಿತ್ವ ಹಾಗೂ ಸರಕಾರದ ಸಹಕಾರದೊಂದಿಗೆ ಇನ್ನಷ್ಟು ಉತ್ತಮ ಮಟ್ಟಕ್ಕೆ ತಲುಪಿಸಲು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.*




***ಕಟ್ಟೆ ವಿಷನ್***

*ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಹಮ್ಮಿಕೊಳ್ಳುವ ಈ ಯೋಜನೆಯನ್ನು ಈಗಾಗಲೇ ಚರ್ಚಿಸಿ ಅಂತಿಮ ರೂಪುರೇಷೆ ನೀಡಲಾಗಿದೆ. ಶಾಲೆಯ ಅಭಿವೃದ್ಧಿಯಲ್ಲಿ ಜನರ ಸಹಭಾಗಿತ್ವ ಉತ್ತಮ ಪಡಿಸಲು ಶಾಲಾ ಪ್ರೊಟೆಕ್ಷನ್ ಕಮಿಟಿ ಮತ್ತು ಹಳೆ ವಿದ್ಯಾರ್ಥಿ ಸಂಘದ ಚಟುವಟಿಕೆಗಳನ್ನು ಸಕ್ರಿಯಗೊಳಿಸಲಾಗುವುದು.ಹೆತ್ತವರನ್ನು, ವಿದ್ಯಾರ್ಥಿಗಳನ್ನು ಆಕರ್ಷಿಸುತ್ತವ ಹಾಗೂ ಕಲಿಕೆಯಲ್ಲಿ ಆಸಕ್ತಿಯನ್ನು ಮೂಡಿಸುವ ಉದ್ದೇಶದೊಂದಿಗೆ ಶಾಲೆಯ ಪರಿಸರವನ್ನು ಹಚ್ಚ ಹಸಿರಾಗಿಸುವ ಗ್ರೀನ್ ಮಿಷನ್ ನಮ್ಮ ಮುಂದಿದೆ. ಹೈಯರ್ ಸೆಕೆಂಡರಿ ವಿಭಾಗದಲ್ಲಿ ಉತ್ತಮ ರೀತಿಯ ಶಿಸ್ತನ್ನು ಖಾತರಿಪಡಿಸಲು ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ.ಶಿಸ್ತು ಮತ್ತು ಕಲಿಕಾ ಗುಣಮಟ್ಟ ಎರಡು ವಿಚಾರದಲ್ಲಿ ಪ್ರಾಯೋಗಿಕವಾದ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು. ಸರಿಸುಮಾರು ಎಂಟು ಎಕ್ರೆಗಿಂತಲೂ ಮಿಗಿಲಾದ ಜಾಗವನ್ನು ಶಾಲೆ ಹೊಂದಿದೆ.ಆದರೆ ಇಲ್ಲಿಯವರೆಗೆ ಜಾಗದ ಗಡಿಯನ್ನು ಗುರುತಿಸಲು, ಖಚಿತಪಡಿಸಲು ಕೆಲವೊಂದು ತಾಂತ್ರಿಕ ಕಾರಣಗಳಿಂದ ಸಾಧ್ಯವಾಗಿಲ್ಲ. ಇದೀಗ ರೀ ಸರ್ವೇ ಮೂಲಕ ಗಡಿಯನ್ನು ಗುರುತಿಸುವ ಪ್ರಕ್ರಿಯೆ ನಡೆಯುತ್ತಿದ್ದು ಸರ್ಕಾರ ಹಾಗೂ ಪಂಚಾಯತಿಗಳ ಸಹಕಾರದೊಂದಿಗೆ ಶಾಲೆಗೆ ಸುತ್ತುಗೋಡೆಯನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.*

*ಹೊಸ ಹೈಸ್ಕೂಲ್ ಕಟ್ಟಡದ ಮುಂಭಾಗದಲ್ಲಿ ಸುಂದರವಾದ ವೃಂದಾವನ ಹಾಗೂ ಮಕ್ಕಳಿಗೆ ಪ್ರಯೋಜನವಾಗುವಂತೆ ಉತ್ತಮ ರೀತಿಯಲ್ಲಿ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು*

ಇರಿಸಲಾಗಿದೆ.ಪಾಳುಬಿದ್ದಿರುವ ಹಳೆಯ ಶಾಲಾ ಕಟ್ಟಡಗಳನ್ನು ಹಾಗೂ ಶೌಚಾಲಯಗಳನ್ನು ತೆರವುಗೊಳಿಸಿ ಸ್ವಸಜ್ಜಿತವಾದ ಒಂದು ಕಟ್ಟಡ ಹಾಗೂ ಶೌಚಾಲಯವನ್ನು ನಿರ್ಮಿಸುವ ಯೋಜನೆಯು ನಮ್ಮ ಮುಂದಿದೆ.ಇಂತಹ ಹಲವು ಕಾರ್ಯಕ್ರಮಗಳು ಕಾಯರ್ ಕಟ್ಟೆ ವಿಷನ್ ಎಂಬ ಯೋಜನೆಯಲ್ಲಿ ಒಳಗೊಂಡಿವೆ.

ಕಲಿಕೆಯಲ್ಲಿ ಅತ್ಯಂತ ಹಿಂದುಳಿದಿರುವ 5 ನೇ ತರಗತಿಯಿಂದ 10 ನೇ ತರಗತಿವರೆಗಿನ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ವಿಶೇಷ ತರಗತಿ ಹಾಗೂ ಕಲಿಕಾ ಪ್ರೋತ್ಸಾಹವನ್ನು ಕೊಟ್ಟು ಶೈಕ್ಷಣಿಕ ಸಾಧನೆಯಲ್ಲಿ ಮುಂದೆ ಬರುವಂತೆ ಈಗಾಗಲೇ ಕೆಲವು ಯೋಜನೆಯನ್ನು ಆರಂಭಿಸಲಾಗಿದೆ. ಕೃಷಿಯ ಬಗ್ಗೆ ಪರಿಸರದ ಬಗ್ಗೆ ವಿದ್ಯಾರ್ಥಿಗಳಲ್ಲಿ ಹೆಚ್ಚು ತಿಳುವಳಿಕೆ ಮತ್ತು ಆಸಕ್ತಿಯನ್ನು ಮೂಡಿಸುವ ಉದ್ದೇಶದಿಂದ ಶಾಲೆಯ ಪರಿಸರದಲ್ಲಿ ಅತ್ಯುತ್ತಮವಾದ ಕೃಷಿ ತೋಟವನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ವಿದ್ಯಾರ್ಥಿಗಳ ಸೃಜನಾತ್ಮಕವಾದ ಸಾಮರ್ಥ್ಯವನ್ನು ಗುರುತಿಸಲು ಹಾಗೂ ಪ್ರೋತ್ಸಾಹಿಸಲು ಸಾಹಿತ್ಯ, ವಿಜ್ಞಾನ, ಸಾಮಾಜಿಕ, ತಾಂತ್ರಿಕ ಗಣಿತ ವಿಚಾರಕ್ಕೆ ಸಂಬಂಧಿಸಿದ ಶಿಬಿರವನ್ನು ನಡೆಸಲು ಉದ್ದೇಶಿಸಲಾಗಿದೆ. ವಿವಿಧ ಹಂತಗಳಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಶಾಲೆಗೆ ಕರೆಸಿ ವಿಚಾರ ವಿನಿಮಯ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುವುದು. ಒಟ್ಟಿನಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯಂತ ದೊಡ್ಡ ಹಿರಿಮೆ, ಗರಿಮೆ ಹೊಂದಿರುವ ನಮ್ಮ ಶಾಲೆಯನ್ನು ಎಲ್ಲಾ ರೀತಿಯಲ್ಲಿ ಮುನ್ನೆಲೆಗೆ ತರುವ ಪ್ರಯತ್ನಗಳು ಈ ಶೈಕ್ಷಣಿಕ ವರ್ಷದಲ್ಲಿಯೂ ಮುಂದುವರೆಯಲಿದೆ. ಶಾಲಾ ಶಿಕ್ಷಕರಕ್ಷಕ ಸಂಘ, ಶಾಲಾ ಸಂಪನ್ಮೂಲ ಗುಂಪು, ಎಸ್ ಎಂ ಸಿ, ಊರ ಪರಊರ ಜನರ ಪೂರ್ಣ ಸಹಕಾರ ಹಾಗೂ ಸಹಭಾಗಿತ್ವದಲ್ಲಿ ಯೋಜನೆಗಳು ಅನುಷ್ಠಾನಗೊಳ್ಳಲಿದೆ.

GHSS PAIVALIKE

# ವಿಜ್ಞಾನ

| Sl.No | ಉದ್ದೇಶಗಳು | ಚಟುವಟಿಕೆಗಳು | ಸಮಯ | ಜವಾಬ್ದಾರಿ |
|---|---|---|---|---|
| 1 | ವೈಜ್ಞಾನಿಕ ಅನ್ವೇಷಣೆಯ ಮನೋಭಾವ ಬೆಳೆಸುವುದು | ಸರಳ ಪ್ರಯೋಗವನ್ನು ಮಾಡಲು TLM ನ್ನು ತಯಾರಿಸುವುದು.<br>ಹೊಸ ಪಾಠಪುಸ್ತಕ ವಿಷಯಗಳಿಗೆ ಅನುಸರಿಸಿTLM ರಚಿಸುವುದು. | ಜೂನ್ ಆಗೋಸ್ತು | ವಿಜ್ಞಾನ ಶಿಕ್ಷಕರು |
| 2 | ವಿಜ್ಞಾನ ಕೌಶಲ್ಯದ ಅಭಿವೃದ್ಧಿ | ಪಾಠಗಳಿಗೆ ಸಂಬಂಧಿಸಿದ ವಸ್ತುಗಳ ಮಾದರಿ ತಯಾರಿಸಿ ಪ್ರದರ್ಶಿಸಿಸುವುದು. | ಶೈಕ್ಷಣಿಕ ವರ್ಷ | ವಿಜ್ಞಾನ ಶಿಕ್ಷಕರು |
| 3 | ಮಾಹಿತಿಯನ್ನು ವಿಶ್ಲೇಷಿಸುವ ಮನೋಭಾವ ಬೆಳೆಸುವುದು. | ಸೆಮಿನಾರ್ ಪ್ರಬಂಧಗಳನ್ನು ಮಂಡಿಸುವುದು. | ಶೈಕ್ಷಣಿಕ ವರ್ಷ | ವಿಜ್ಞಾನ ಶಿಕ್ಷಕರು |
| 4 | ವೈಜ್ಞಾನಿಕ ಉತ್ಪನ್ನಗಳ ಮಾದರಿ ತಯಾರಿಯ ಸಾಮರ್ಥ್ಯ ಬೆಳೆಸುವುದು. | ಶೈಕ್ಷಣಿಕ ವರ್ಷದಲ್ಲಿ ತಾವು ತಯಾರಿಸಿದ ವೈಜ್ಞಾನಿಕ ಉತ್ಪನ್ನಗಳ ಮಾದರಿಗಳನ್ನು ಪ್ರದರ್ಶಿಸಲು ಅವಕಾಶ ನೀಡುವುದು. | ಅಕ್ಟೋಬರ್ ತಿಂಗಳು | ವಿಜ್ಞಾನ ಶಿಕ್ಷಕರು Science club |
| 5 | ಪ್ರಾಯೋಗಿಕ ಕೌಶಲವನ್ನು ಹೆಚ್ಚಿಸುವುದು. | ವಿಜ್ಞಾನ ಕಾರ್ಯಗಾರಗಳನ್ನು ಆಯೋಜಿಸುವುದು. | ಜನವರಿ ತಿಂಗಳು | Science club |

GHSS PAIVALIKE

# ಗಣಿತ

| Sl.No | ಉದ್ದೇಶಗಳು | ಚಟುವಟಿಕೆಗಳು | ಸಮಯ | ಜವಾಬ್ದಾರಿ |
|---|---|---|---|---|
| 1 | ಪರಿಕಲ್ಪನಾತ್ಮಕ ವಿವರಗಳನ್ನು ಸಾಧಿಸುವುದು | ಪೂರ್ವ ಪರೀಕ್ಷೆ ನಡೆಸಿ ಪಟ್ಟಿಯನ್ನು ಸಿದ್ಧಪಡಿಸುವುದು | ಜೂನ್ ಮೊದಲ ವಾರ | ಅಧ್ಯಾಪಕರು ಶಿಕ್ಷಣದಲ್ಲಿ ಮುಂದಿರುವ ಮಕ್ಕಳು |
| 2 | ರಚನೆಯಲ್ಲಿರುವ ಸಾಮರ್ಥ್ಯವನ್ನು ಸಾಧಿಸುವುದು | ಜ್ಞಾಮಿತಿ ಬಾಕ್ಸಿನ ಜಾಮಿತಿ ಲಭ್ಯತೆ ಹಾಗೂ ಅದರ ಉಪಯೋಗಗಳ ವಿವರಣೆ | ಮುಂದುವರೆದ ಚಟುವಟಿಕೆ | ಅಧ್ಯಾಪಕರು ಪಿಟಿಎ |
| 3 | ಗಣಿತದ ದೈನಂದಿನ ಜೀವನದಲ್ಲಿರುವ ಪರಿಕಲ್ಪನೆಗಳ ಮಹತ್ವವನ್ನು ತಿಳಿಸುವುದು | Field trip ನಡೆಸುವುದು | ಒಂದು ಸಮಯದಲ್ಲಿ | ಗಣಿತ ಅಧ್ಯಾಪಕರು |
| 4 | ಗಣಿತದ ಆಶಯಗಳಿಂದ ನಿರ್ಮಾಣಗೊಳ್ಳುವ ಗಣಿತ ರೂಪಗಳು ಅಳತೆಗಳು ಇವುಗಳನ್ನು ಪರಿಚಯಿಸುವುದು | ವರ್ಕ್ ಶಾಪ್ ನಡೆಸುವುದು ಮತ್ತು ಕ್ಲಬ್ ಚಟುವಟಿಕೆಗಳನ್ನು ಆಯೋಜಿಸುವುದು | ಶೈಕ್ಷಣಿಕ ವರ್ಷದಲ್ಲಿ ಒಂದು | ಗಣಿತ ಅಧ್ಯಾಪಕರು |
| 5 | ಗುಂಪಿನ ಮಹತ್ವವನ್ನು ತಿಳಿಸುವುದು | ಗುಂಪು ಚಟುವಟಿಕೆ | ಮುಂದುವರೆದ ಚಟುವಟಿಕೆ | ಗಣಿತ ಅಧ್ಯಾಪಕರು, GROUP LEADER |
| 6 | ಶಿಕ್ಷಕರು ಮಕ್ಕಳಲ್ಲಿ ಸಣ್ಣ ತರಗತಿಗಳಲ್ಲಿ ಕಲಿತ ವಿಷಯಗಳನ್ನು ನೆನಪಿಸುವುದು ಚರ್ಚಿಸುವುದು ಹಾಗೂ ಅವರ ಪೂರ್ವಜ್ಞಾನವನ್ನು ಬಲಪಡಿಸುವುದು | ಚಟುವಟಿಕೆಗಳನ್ನು ನೀಡುವುದು ಚರ್ಚೆಗಳು ಮತ್ತು ಗುಂಪು ಚಟುವಟಿಕೆಗಳ ಮೂಲಕ ಗುರಿಯನ್ನು ಸಾಧಿಸುವುದು | ಶೈಕ್ಷಣಿಕ ವರ್ಷದ ಮುಂದುವರೆದ ಚಟುವಟಿಕೆ | |
| 7 | ಗಣಿತ ವಿಷಯಕ್ಕೆ ಮಕ್ಕಳ ಉತ್ತಮ ಕೊಡುಗೆಗಳು | ಗಣಿತ ಗ್ರಾಮ ಮಕ್ಕಳು ಅಲ್ಲದೆ ಸಮೀಪ ಪ್ರದೇಶದ ಗಣಿತ ಅಧ್ಯಾಪಕರ ಸಂಗಮ | ಶನಿವಾರ ದಿನಗಳು | ಗಣಿತ ಅಧ್ಯಾಪಕರು |
| 8 | ಗಣಿತ ಸ್ಪರ್ಧೆಗಳಿಗೆ ಗಣಿತ ಮೇಳಕ್ಕೆ | ಗಣಿತ ಕ್ಲಬ್ಬಿನ ಚಟುವಟಿಕೆಗಳನ್ನು | ತಿಂಗಳಿಗೆ ಒಂದು | ಗಣಿತ |

GHSS PAIVALIKE

| | | | | |
|---|---|---|---|---|
| | ಸ್ಪರ್ಧಿಸಲು ಮಕ್ಕಳನ್ನು ಸಿದ್ಧಪಡಿಸುವುದು | ಉತ್ತಮಪಡಿಸುವುದು ಸ್ಪರ್ಧೆಗಳಿಗೆ ಬೇಕಾದ ಸವಲತ್ತುಗಳನ್ನು ಮಾಡಿಕೊಡುವುದು | | ಅಧ್ಯಾಪಕರು |
| 9 | ಗಣಿತ ಲ್ಯಾಬ್ | ವರ್ಕ್ಶಾಪ್ ನ ಮೂಲಕ ಲ್ಯಾಬಿಗೆ ಬೇಕಾದ ಪಠ್ಯ ಸಾಮಗ್ರಿಗಳನ್ನು ಸಂಗ್ರಹಿಸುವುದು | MAY-JUNE | ಗಣಿತ ಅಧ್ಯಾಪಕರು PTA ,Club secretary |
| 10 | ರಕ್ಷಕರಿಗೆ ಬೋಧನಾ ತರಗತಿ | ತಿಂಗಳಿಗೊಮ್ಮೆ P T A ವಿಷಯಗಳನ್ನು ತಿಳಿಸುವುದು | | ಅಧ್ಯಾಪಕರು,HM,PTA |
| | | | | |

GHSS PAIVALIKE

# ಸಮಾಜ ವಿಜ್ಞಾನ

*ಸಮಾಜ ವಿಜ್ಞಾನ ಕಲಿಕೆ ಮೂಲಕ ವಿಶಾಲ ಪ್ರಪಂಚದ ಕುರಿತು ವೈವಿಧ್ಯಪೂರ್ಣವಾದ ಸಾಮಾಜಿಕ ಜೀವನದ ಕುರಿತು ಸಾಮಾಜಿಕ ಸಂವಹನದ ಮೂಲಕ ವಿದ್ಯಾರ್ಥಿಗಳು ಮನದಟ್ಟು ಮಾಡುವರು ಇತಿಹಾಸ ಭೂಗೋಳ ಶಾಸ್ತ್ರ ಸಮಾಜಶಾಸ್ತ್ರ ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಪೌರನೀತಿಗಳನ್ನು ಒಳಗೊಂಡು ಸಮಾಜ ವಿಜ್ಞಾನವು ವಿಶಾಲವಾದ ಕಲಿಕಾ ವಲಯಗಳನ್ನು ಒಳಗೊಂಡಿದೆ ನಿರಂತರವಾದ ಸಾಮಾಜಿಕ ಸಂವಹನ ದೊಂದಿಗೆ ಮಾತ್ರ ಈ ವಿಷಯಗಳನ್ನು ಅರ್ಥಪೂರ್ಣವಾಗಿ ಕಲಿಯಲು ಸಾಧ್ಯ .*

*ವಿವಿಧ ದಿನಾಚರಣೆಗಳು ಬಯಲು ಪ್ರವಾಸ ಚಾರಿತ್ರಿಕ ಸ್ಥಳಗಳ ಭೇಟಿ ಪ್ಯಾನೆಲ್ ಚರ್ಚೆ ಸಮಾಜ ವಿಜ್ಞಾನ ಪ್ರಯೋಗಾಲಯ ನಿರ್ಮಾಣ ಮೊದಲಾದ ಪ್ರಾಯೋಗಿಕ ಅನುಭವಗಳನ್ನು ನೀಡುವ ಚಟುವಟಿಕೆಗಳ ಮೂಲಕ ಸಮಾಜ ವಿಜ್ಞಾನ ಕಲಿಕೆಯ ಪ್ರಕ್ರಿಯೆಗಳನ್ನು ಜಾರಿಗೊಳಿಸಲು ಪ್ರಯತ್ನಿಸುವುದು.*

*ಶೈಕ್ಷಣಿಕ ಯೋಜನೆಯ ಅಂಗವಾಗಿ ಅಂದಾಜಿಸಲ್ಪಡುವ ಪ್ರಧಾನ ಚಟುವಟಿಕೆಗಳು.*

ಜುಲೈ   --ಜನಸಂಖ್ಯಾ ದಿನಾಚರಣೆ , ಭಾಷಣ ಕಾರ್ಯಕ್ರಮ

ಆಗಸ್ಟ್  -- ಹಿರೋಶಿಮಾ ನಾಗಸಾಕಿದಿ ದಿನಾಚರಣೆ,ಪ್ಯಾನೆಲ್ ಚರ್ಚೆ

ಸೆಪ್ಟೆಂಬರ್ --ಓಝೋನ್ ದಿನಾಚರಣೆ

ಅಕ್ಟೋಬರ್ --ವಿಶ್ವ ಸಂಸ್ಥೆ ದಿನಾಚರಣೆ , ಯುದ್ಧ ವಿರೋಧಿ ಮನೋಭಾವ ಉಂಟುಮಾಡುವ ಸ್ಪರ್ಧೆಗಳು

ನವೆಂಬರ್ --ಬಯಲು ಪ್ರವಾಸ ಆಯೋಜನೆ

ಡಿಸೆಂಬರ್-- ನೀರಿನ ಮೂಲಗಳ ಕುರಿತಾದ ಅಧ್ಯಯನ

ಜನವರಿ --ಸಮಾಜವಿಜ್ಞಾನ ಸಂಬಂಧಿತ ಸಾಧಕರ ಸಂದರ್ಶನ ನಡೆಸುವುದು.

GHSS PAIVALIKE

# ಕನ್ನಡ

ಸಮಗ್ರ ಗುಣಮಟ್ಟ ಶಿಕ್ಷಣ ಎಂಬುದು ಈ ಶೈಕ್ಷಣಿಕ ವರ್ಷದ ಶಿಕ್ಷಣ ಇಲಾಖೆಯ ಮುಖ್ಯ ಧ್ಯೇಯ. ಆಯಾ ತರಗತಿಗೆ ಹೊಂದಿಕೊಂಡು ಮಗು ಪಡೆಯಬೇಕಾದ ಕಲಿಕಾ ಸಾಧನೆ ಖಾತರಿಪಡಿಸಿಕೊಳ್ಳುವುದೇ ಯೋಜನೆಯ ಉದ್ದೇಶ. ಭಾಷೆಯು ವಿದ್ಯಾರ್ಥಿಯ ಕಲಿಕಾ ಸಾಧನೆಯಲ್ಲಿ ಪ್ರಮುಖವಾದ ಒಂದು ಮಾಧ್ಯಮ. ಕನ್ನಡ ಭಾಷೆಯಲ್ಲಿ ಉತ್ತಮ ಪರಿಜ್ಞಾನವನ್ನು ಹೊಂದಿದರೆ ಇತರ ವಿಷಯಗಳಲ್ಲಿಯೂ ಮಗು ಶೈಕ್ಷಣಿಕ ಗುಣಮಟ್ಟವನ್ನು ಪಡೆದುಕೊಳ್ಳುವುದರಲ್ಲಿ ಸಮರ್ಥನಾಗುತ್ತಾನೆ. ಆದುದರಿಂದ ವಿದ್ಯಾರ್ಥಿಗಳಲ್ಲಿ ಓದಿನ ಸಾಮರ್ಥ್ಯ,ಬರೆಯುವ ಸಾಮರ್ಥ್ಯ,ಅರ್ಥೈಸಿಕೊಳ್ಳುವ ಸಾಮರ್ಥ್ಯವೃದ್ಧಿಸಿಕೊಳ್ಳಲು ಪೂರಕವಾಗುವಂತೆ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಪಠ್ಯಪುಸ್ತಕದ ಆಶಯದ ಸುಲಭ ಗ್ರಹಿಕೆ, ತಿಳುವಳಿಕೆ, ಆಲೋಚನ ಕೌಶಲ,ಸೃಜನಾತ್ಮಕತೆ ಉತ್ತೇಜಿಸುವ ಚಟುವಟಿಕೆಗಳನ್ನು ಇದರಲ್ಲಿ ಒಳಗೊಂಡಿವೆ. ಪಠ್ಯ ಪಠ್ಯೇತರ ಚಟುವಟಿಕೆಗಳಿಗೂ ಪ್ರಾಧಾನ್ಯತೆಯನ್ನು ನೀಡಲಾಗಿದೆ

.

**ಕನ್ನಡ**

ಚಟುವಟಿಕೆ 1

ಹೆಸರು = ಭಾಷಾ ಕೌಶಲ ಚಟುವಟಿಕೆಗಳು

ಉಪವಲಯ: ಭಾಷಾ ಜ್ಞಾನದ ಮೂಲಭೂತ ತಿಳುವಳಿಕೆ.

ಉದ್ದೇಶ : ಕನ್ನಡ ಭಾಷೆಯಲ್ಲಿ ಚೆನ್ನಾಗಿ ವ್ಯವಹರಿಸಲು ಸಮರ್ಥರನ್ನಾಗಿಸುವುದು.

ಚಟುವಟಿಕೆಗಳು...

●ಪರಿಚಯವನ್ನು ಹೇಳುವುದು,ಬರೆಯುವುದು.

●ಇಷ್ಟವಾದ ತಿಂಡಿ ತಿನಿಸುಗಳ ಪಟ್ಟಿ ತಯಾರಿಸಿ ಓದಿಸುವುದು.

●ಪದ ಸೂರ್ಯ ತಯಾರಿಸುವುದು.

●ಗೆಳತಿಗೆ ಪತ್ರ ಬರೆಸುವುದು, ದಿನಚರಿ ಬರೆಸುವುದು.

●ದಿನ ಪತ್ರಿಕೆಗಳನ್ನು ತರಗತಿಯಲ್ಲಿ ಓದಿಸುವುದು.

ಕಾಲಾವಧಿ ಜೂನ್ ತಿಂಗಳ 2 ವಾರ

ಜವಾಬ್ದಾರಿ ಭಾಷಾಧ್ಯಾಪಕರು

ಚಟುವಟಿಕೆ 2

ಹೆಸರು = ಬರಹ

ಉಪ ವಲಯ = ಭಾಷಾ ಸಾಮರ್ಥ್ಯಗಳ ವಿಕಾಸ

ಉದ್ದೇಶ = ಸೃಜನಶೀಲತೆ ಹೆಚ್ಚಿಸುವುದು, ಸೃಜನಾತ್ಮಕ ಬರಹಗಳನ್ನು ರಚಿಸುವ ತಿಳುವಳಿಕೆ.

ಚಟುವಟಿಕೆಗಳು

ಕತೆ, ಕವನ, ಪ್ರಬಂಧ ರಚನೆಯ ಪರಿಚಯ. ಸೃಜನಾತ್ಮಕ ಬರಹಗಳ ಸಂಕಲನ ಬಿಡುಗಡೆ. ಪಾಠ ಭಾಗದಲ್ಲಿ ಬರುವ ಚಟುವಟಿಕೆಗಳಿಗೆ ಪೂರಕವಾಗುವಂತೆ ಈ ಸಂಕಲನದಿಂದ ಮಾದರಿಯನ್ನು ಬಳಸಿಕೊಳ್ಳುವುದು.

ಕಾಲಾವಧಿಎರಡು ತಿಂಗಳಿಗೆ ಒಂದು ಸಲ

ಜವಾಬ್ದಾರಿ ಕನ್ನಡ ಸಾಹಿತ್ಯ ಸಂಘ

ಆರ್ಥಿಕ ಸಹಾಯವಿವಿಧ ಕ್ಲಬ್ಬುಗಳು, ಪಿಟಿಎ ಸಮಿತಿ.

ಚಟುವಟಿಕೆ 3

ಹೆಸರು = ತಾಂತ್ರಿಕ ಮಾಯಾಜಾಲ.

ಉಪವಲಯಭಾಷಾ ಸಾಮರ್ಥ್ಯಗಳ ವಿಕಾಸ ತಂತ್ರಜ್ಞಾನಗಳ ಬಳಕೆ.

ಉದ್ದೇಶಸೃಜನಶೀಲ ರಚನೆಗಳನ್ನು ಆಧುನಿಕ ಮಾಧ್ಯಮಗಳ ಮೂಲಕ ವಿನ್ಯಾಸಗೊಳಿಸುವುದು ಪ್ರಕಟಗೊಳಿಸುವುದು ಪ್ರಚಾರಗೊಳಿಸುವುದು

ಚಟುವಟಿಕೆಗಳು

ಸೃಜನಶೀಲತೆಗೆ ಒತ್ತು ನೀಡುವ ಚಟುವಟಿಕೆಗಳು, ಕರಪತ್ರಗಳು, ಬಿತ್ತಿ ಪತ್ರಿಕೆಗಳು,, ಆಮಂತ್ರಣ ಪತ್ರಿಕೆಗಳು ತಯಾರಿಸುವ ವಿಧಾನ. ಪಿಡಿಎಫ್, ಡಿಜಿಟಲ್ ಉತ್ಪನ್ನಗಳನ್ನು ತಯಾರಿಸುವುದು. ಐಸಿಟಿ ಸಹಾಯದಿಂದ ಪ್ರದರ್ಶಿಸುವುದು, ಶಾಲಾ ಬ್ಲಾಗ್‌ಗಳಲ್ಲಿ ಸೇರಿಸುವುದು.



GHSS PAIVALIKE

ಕಾಲಾವಧಿ   ಪ್ರತಿ ತಿಂಗಳು

ಜವಾಬ್ದಾರಿ   ಕನ್ನಡ ಸಾಹಿತ್ಯ ಸಂಘ ಹಾಗೂ ಎಸ್ಐಟಿಸಿ

ಆರ್ಥಿಕ ಸಹಾಯ   ಪಿಟಿಎ ಸಮಿತಿ.

GHSS PAIVALIKE

# HINDI

बच्चों की स्तरों के अनुसार पहले टेस्ट करके याने अक्षरों के प्रति उनका ज्ञान का पहचान करके प्रश्न पूछना बाद में परीक्षा लिखवाना आदि कार्यों में ध्यान देना । अक्षरों के सहारे से वाक्य लिखवाना और कार्डों के द्वारा , चिह्नों के दवारा, पदसूर्य आदि के द्वारा शब्द और वाक्यों का प्रयोग करना । चित्रकथा कार्टून आदि अधिक वाचन केलिफ देना अनिवार्य है। हप्ते की गिनती और नाम पढ़ाते हैं। ये सब आठवीं कक्षा की बच्चों केलिए जून से जनवरी तक की पाठयोजना है। नौवीं कक्षा की बच्चों कैलिए हिन्दी लिखने और पढ़ने में पिछडे वाले बच्चों को अधिक प्रोत्साहन करते हैं। वर्कशीट और सचित्र पुस्तकें पढ़ने केलिए देना उचित है। नाम सर्वनाम और विशेषण के बारे में समझाते हैं। कक्षा में सूचना बोर्ड और चाटौं के द्वारा बाद में नारों के द्वारा अपना वाचन कार्य सुगम बनाते हैं। कविता और कथा को देकर बच्चों की आराय ग्रहण करने की क्षमता बढाते हैं। पोस्टर की नमूना देकर बच्चों को पोस्टर बनाने की क्षमता बढ़ाता है। ये कार्य जून से नवंबर तक की समयकाल में करना है। ये प्रवृत्ति जून से नवंबर तक की है।

दसवीं कक्षा की छात्रों को भाषा क्षमता बढाने के लिए अनुबंध कार्य करके याने भाषाइक ज्ञान बढ़ाने का कार्य की जाती है। नाटकों के अवतरण करके संदर्भौचित संभाषण तैयार करते हैं। पात्रों के द्वारा चरित चित्रण, टिप्पणि आदि बनाते है। हर दिन डायरी लिखने का कार्य करते हैं। येप्रक्रिया जून से जनवरी तक किये जाते हैं।

महीना

। जून 5

GHSS PAIVALIKE

*पर्यावरण दिवस*

*2 जून 19*

*वाचन दिवस*

*उ जून 26*

*लोक नशा - निषेध दिवस*

*4 जुलाई 31*

*मुंशी प्रेमचंद जयंती*

*5 . आगस्त 15*

*स्वतंत्रता दिवस*

*6 सितंबर 5*

*अध्यापक दिवस*

*7 . सितंबर 14*

*हिन्दी दिवस*

*8 अक्तूबर 2*

*गाँधी जयंती*

*9 . नवंबर ।*

*केरल का जन्मदिन*

*10. नवंबर 14*

*बालदिवस*

*॥. दिसंबर 25*

GHSS PAIVALIKE

क्रिस्थामस

12 . जनवरी 26

गणतंत्र दिवस

गतिविधियाँ

। पेड़ पौधों का वितरण, पोस्टर प्रतिज्ञा

2 . वाचन कार्ड का वाचन' पोस्टर, उद्घोषण

3 पोस्टर, प्रतिज्ञा, नारे, भाषण

4 . पोस्टर, पेंसिल् ड्राइंग

5 . पोस्टर, देशभक्ति गीत, संकेतपट

6 . भाषण,पोस्टर, टिपणी लेखन,प्रश्नोत्तरी , चित्ररचना

7 . पोस्टर, कवितारचना, नाटक, चित्ररचना, पात्रचना, कवितालापन

8 . पोस्टर, भाषण, पेंसिल ड्राइंग

9 . पोस्टर , केरल से संबंधित गीत सुनाना

10. पोस्टर

11. कार्ड निर्माण

12. पोस्टर, भाषण , ड्राइंग

GHSS PAIVALIKE

# ENGLISH

*Teaching English language not an ordinary task in our school .It has many challenges in every aspect .As the medium instruction is a local language. The problem exposure to the intended learning language is decisive for the learner. The learners has to be exposed more in the course of study .The teacher should concentrate more on this issue and it is challenging one .The learning technique  and teaching technique need to be synchronised with medium of instruction additional effort the exposure to the language has to be taken. Such efforts are to be designed.*

*Special program and English club activities are to be arranged aiming it Giving more exposure to children the list of activities would be arranged under the auspicious English club .*

** conducting assembly in English with very discourses it a provides the children listening opportunity .*
** language games like pic and act ,arranging puzzle etc*
** Conducting various competition during Day celebrations which include poster writing speech essay writing preparing word trees caption writing .*
** Special grammar classes to be arranged conducting debate competitions*
** Conducting interviews with the local personalities.*
**Showing English field and using information communication technology in the class.*

GHSSPAIVALIKE

# UP Section

# ಸಮಾಜ ವಿಜ್ಞಾನ

| Sl.No | ಉದ್ದೇಶಗಳು | ಚಟುವಟಿಕೆಗಳು | ಸಮಯ | ಜವಾಬ್ದಾರಿ |
|---|---|---|---|---|
| 1 | ಸಮಾಜ ವಿಜ್ಞಾನದ ಮೂಲಭೂತ ಧ್ಯಾನ ಮತ್ತು ಪರಿಕಲ್ಪನೆಗಳನ್ನು ಪರೀಕ್ಷಿಸುವುದು ಮತ್ತು ಸಂಪಾದಿಸುವುದು | ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಮೂಲಭೂತ ಮಟ್ಟದ ಜ್ಞಾನವನ್ನು ಪರೀಕ್ಷಿಸಲು ಪ್ರತಿಯೊಬ್ಬ ಕಲಿಯುವರಿಗೆ ಒಗಟುಗಳನ್ನು ನೀಡುವುದು<br>**ಸ್ಮರಣೆ** :<br>ಅಂತರಾಷ್ಟ್ರೀಯ ಮಟ್ಟದಿಂದ ಜಿಲ್ಲಾ ಮಟ್ಟದ ವರೆಗಿನ ನದಿಗಳು ಭೌಗೋಳಿಕತೆ, ರಾಜಧಾನಿಗಳು ಮತ್ತು ವೈವಿಧ್ಯತೆ ಇಂತಹ ಮೂಲಭೂತ ಮಾಹಿತಿಯ ಆಧಾರದ ಮೇಲೆ ಐಸಿಟಿ ಪರಿಗರಣಗಳನ್ನು ಬಳಸಿಕೊಂಡು ಮೆಮೊರಿ ಪರೀಕ್ಷೆಯನ್ನು ನಡೆಸುವುದು | JUNE<br>ಶೈಕ್ಷಣಿಕ ವರ್ಷದಲ್ | ಸಮಾಜ ವಿಜ್ಞಾನ ಅಧ್ಯಾಪಕರು |
| 2 | ಕಲಿಯುವವರಿಗೆ ಐತಿಹಾಸಿಕ ಅರಿವು ಮೂಡಿಸುವುದು | ವರ್ಚುಯಲ್ ಫೀಲ್ಡ್ ಟ್ರಿಪ್<br>ಮಕ್ಕಳಲ್ಲಿ ಐತಿಹಾಸಿಕ ಅರಿವನ್ನು ಬೆಳೆಸಲು ಐಸಿಟಿ ಪರಿಕರೆಗಳನ್ನು ಬಳಸಿಕೊಂಡು ಪ್ರಪಂಚದ ಅತ್ಯಂತ | JULY | ಸಮಾಜ ವಿಜ್ಞಾನ ಅಧ್ಯಾಪಕರು |

GHSS PAIVALIKE

| | | | | |
|---|---|---|---|---|
| | | ಐತಿಹಾಸಿಕವಾಗಿ ಪ್ರಮುಖ ಸ್ಥಳಗಳ ವಿಡಿಯೋಗಳನ್ನು ತೋರಿಸು ವುದು | | |
| 3 | ಜೀವನಕ್ಕೆ ಪ್ರಜಾಪ್ರಭುತ್ವದ ವಿಧಾನವನ್ನು ಬೆಳೆಸಿಕೊಳ್ಳಿ | ಶಾಲೆಯಿಂದ ಹಂತಕ್ಕೆ ಅವರು ತಮ್ಮ ಪೋಷಕರೊಂದಿಗೆ ಗ್ರಾಮ ಸಭೆ ಮತ್ತು ವಾರ್ಡಿಸಬೆಯಲ್ಲಿ ಭಾಗವಹಿಸುವಮೂಲಕ ಪ್ರಜಾಪ್ರಭುತ್ವದ ಮೂಲ ಅಂಶಗಳನ್ನು ಕಲಿಯುವಂತೆಮಾಡುವುದು | ಶೈಕ್ಷಣಿಕ ವರ್ಷದಲ್ | ಸಮಾಜ ವಿಜ್ಞಾನ ಅಧ್ಯಾಪಕರು |
| 4 | ನೈಸರ್ಗಿಕ ವಿಕೋಪಗಳ ಬಗ್ಗೆ ಹರಿಯು ಮೂಡಿಸುತ್ತದೆ ಮತ್ತು ರಕ್ಷಣಕಾರ್ಯಚರಣೆಗಳಲ್ಲಿ ಭಾಗವಹಿಸಲು ಸಹಾಯ ಮಾಡುತ್ತದೆ | ಪ್ರಖ್ಯಾತ ತಾಂಡವ ಒಂದು ನೋಟ ಭೂಕಂಪಗಳು ಸುನಾಮಿ ಬಿರುಗಾಳಿಗಳು ಪ್ರವಾಹಗಳು ಮತ್ತು ಭೂಕುಸಿತಗಳ ಭಯಾನಕ ದೃಶ್ಯಗಳ ಮೂಲಕ ವಿದ್ಯಾರ್ಥಿಗಳಿಗೆ ನೈಸರ್ಗಿಕ ವಿಕೋಪಕ ವಿಕೋಪಕಗಳತೆಯ ಬಗ್ಗೆ ಕಲಿಸಲಾಗುತ್ತದೆ ಅಗ್ನಿಶಾಮಕ ದಳದ ಸಿಬ್ಬಂದಿ ಸಹಾಯದಿಂದ ಪ್ರಾತ್ಯಕ್ಷಿಕ ತರಗತಿಗಳಾಗುತ್ತದೆ ಮತ್ತು ರಕ್ಷಣಾ ಕಾರ್ಯಾಚರಣೆಗಳಲ್ಲಿ ತೊಡಗಿಸಿಕೊಳ್ಳುವ ಅಗತ್ಯತೆಯನ್ನು ಬಗ್ಗೆ ಅರಿವು ಮೂಡಿಸುವುದು | ಶೈಕ್ಷಣಿಕ ವರ್ಷದಲ್ | ಸಮಾಜ ವಿಜ್ಞಾನ ಅಧ್ಯಾಪಕರು |
| 5 | ಜನರು ತಮ್ಮ ಸಹಮಾನವರೊಂದಿಗೆ ಸಮಾನತೆ ಭಾವನೆಯನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸುತ್ತದೆ | ಸ್ವಲ್ಪ ಒಳ್ಳೆಯತನ ನೈಸರ್ಗಿಕ ವಿಕೋಪಗಳು ಮತ್ತು ಬಲಿಪಶುಗಳ ಸ್ಥಳಗಳಿಗೆ ಭೇಟಿ ನೀಡುವ ಮೂಲಕ ವಿದ್ಯಾರ್ಥಿಗಳಿಗೆ ತಮ್ಮ ಪಾತ್ರವನ್ನು ನಿರ್ವಹಿಸಲು ಅವಕಾಶ ನೀಡುವುದು ಅಭ್ಯಾಸದ ಭಾಗವಾಗಿ ಮಕ್ಕಳು ಸಂಗ್ರಹಿಸಿದ ವಸ್ತುಗಳನ್ನು ವಿಪತ್ತು ಪೀಡಿತ ಪ್ರದೇಶಗಳಿಗೆ ಪರಿಹಾರ ಒದಗಿಸಲು ಬಳಸಲಾಗುವುದು | ಶೈಕ್ಷಣಿಕ ವರ್ಷದಲ್ | ಸಮಾಜ ವಿಜ್ಞಾನ ಅಧ್ಯಾಪಕರು |
| 6 | ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ದುರುಪಯೋಗ ಅಪರಾಧ ಚಟುವಟಿಕೆಗಳು ಮತ್ತು | ಜೇಡರ ಬಲೆಯಿಂದ ಜಿಗಿರಿ ಸಮಾಜ ವಿಜ್ಞಾನ ಕ್ಲಬ್ ಆಶ್ರಯದಲ್ಲಿ ಮಕ್ಕಳ ಮತ್ತು ಪೋಷಕರಿಗೆ ರಸ್ತೆ | ಶೈಕ್ಷಣಿಕ ವರ್ಷದಲ್ | ಸಮಾಜ ವಿಜ್ಞಾನ ಅಧ್ಯಾಪಕರು |

GHSS PAIVALIKE

| | | | | |
|---|---|---|---|---|
| | ರಸ್ತೆ ಸುರಕ್ಷತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಗುತ್ತದೆ | ಸುರಕ್ಷತೆ ಮತ್ತು ಸೈಬರ್ ಅಪರಾಧದ ಕುರಿತು ಜಾಗೃತಿ ತರಗತಿಗಳನ್ನು ಆಯೋಜಿಸಲಾಗುತ್ತಿದೆ | | |
| 7 | ಕೇರಳ ಭಾರತದ ನಕ್ಷೆ | ಭೂಪಟ ಓದು ಭೂಪಟ ರಚನೆ ಸಂಕೇತಗಳ ತಿಳುವಳಿಕೆ ಅನುಕ್ರಮಣಿಕೆ ತಯಾರಿ | ಪಾಠ ಭಾಗದಲ್ಲಿ ಬರುವ ಸಂದರ್ಭದಲ್ಲಿ | |
| 8 | ಸಾಮಾಜಿಕ ಅಧ್ಯಯನದ ಮೂಲಕ ಪಡೆದ ಜ್ಞಾನವನ್ನು ಪ್ರದರ್ಶಿಸುವುದು | ಚಾರ್ಟು ತಯಾರಿ, ಆಲ್ಬಮ್ ತಯಾರಿ, ಕಲಿಕೊಸ್ವನ್ನಗಳು, ರಸಪ್ರಶ್ನೆಗಳು | ವರ್ಷದ ಕೊನೆಗೆ | HM,SRG,CLASS TEACHER, CPTA |
| 9 | ಸಾಮಾಜಿಕ ಅಧ್ಯಯನದ ಮೂಲಕ ಪಡೆದ ಜ್ಞಾನದ ಬಗ್ಗೆ ಬರೆಯುವುದು | ಸಮಾಜ ಪ್ರತಿಕ್ರಿಯೆ ಉತ್ಪಾದನೆ | ವರ್ಷದಲ್ಲಿ ಒಂದು | ಸಮಾಜ ವಿಜ್ಞಾನ ಅಧ್ಯಾಪಕರು |
| | | | | |

# <u>ಕನ್ನಡ</u>

| Sl. No | ಉದ್ದೇಶಗಳು | ಚಟುವಟಿಕೆಗಳು | ಸಮಯ | ಜವಾಬ್ದಾರಿ |
|---|---|---|---|---|
| 1 | ಮೂಲಭಾಷಾ ಕೌಶಲ್ಯಗಳ ಅಭಿವೃದ್ಧಿ ಕಲಿಯುವವರು ವಿಚಾರಗಳನ್ನು ಸಂವಹನದ ಮಾಡಲು ಮತ್ತು ಶಬ್ದ ಕೋಶನ ಬುದ್ಧಿಪಡಿಸಲು ಅನುವು ಮಾಡಿ ಕೊಡುವುದು | **<u>ನನ್ನ ರಜೆ ;</u>** ವಿದ್ಯಾರ್ಥಿಗಳು ತಮ್ಮ ರಾಜ ಅನುಭವಗಳನ್ನು ವಿವಿಧ ರೀತಿಯ ಮೂಲಕ ಕಥೆ ಕವಿತೆ ಪ್ರವಾಸ ಕಥನ ಅನುಭವ ಟಿಪ್ಪಣಿ ಪ್ರಸ್ತುತಪಡಿಸುವುದು **<u>ಭಾಷೆ ಶಾಸ್ತ್ರ ;</u>** ಅಕ್ಷರಗಳು ಮತ್ತು ಪದಗಳನ್ನು ಪುನರಾವರ್ತಿಸುವ ಸಾಲುಗಳನ್ನು ಉಚ್ಚರಿಸುವ ಮೂಲಕ ಅವರು ಕಾಗುಣಿತ ಮತ್ತು ಆನಂದವನ್ನು | JUNE | ಕನ್ನಡ ಶಿಕ್ಷಕಿ |

GHSS PAIVALIKE

| | | | | |
|---|---|---|---|---|
| | | ಬೆಳೆಸಿಕೊಳ್ಳುವುದು.<br>**<u>ಪದಗಳಿಂದ ವಾಕ್ಯಗಳಿಗೆ</u>** ; ಅಕ್ಷರಗಳು ಮತ್ತು ಚಿಹ್ನೆಗಳನ್ನು ಹೊಂದಿರುವ ಕಾರ್ಡುಗಳನ್ನು ಬಳಸಿ ಪದಗಳು ಮತ್ತು ವಾಕ್ಯಗಳನ್ನು ನಿರ್ಮಿಸುವುದು | | |
| 2 | ಕಲಿಯುವವರಲ್ಲಿ ಅರ್ಥಪೂರ್ಣ ಓದುವಿಕೆಯನ್ನು ಖಚಿತಪಡಿಸಿಕೊಳ್ಳುವುದು | **<u>ಸುದ್ದಿ ಪ್ರಪಂಚಕ್ಕೆ ;</u>**ವಿದ್ಯಾರ್ಥಿಗಳು ವಾರದಲ್ಲಿ ಎರಡು ಸಲ ಶಾಲಾ ಎಸ್ಸೆಂಬ್ಲಿಯಲ್ಲಿ ಪಾಲ್ಗೊಳ್ಳುವುದು ನುಡಿಮುತ್ತು ಭಾಷಣ ರಶಪ್ ರಸಪ್ರಶ್ನೆಗಳಲ್ಲಿ ಭಾಗವಹಿಸು ಇದು ಅವರ ಸ್ಪಂದಿಸುವಿಕೆಯನ್ನು ಉತ್ತೇಜಿಸುತ್ತದೆ ಮತ್ತು ಉಚ್ಚಾರಣೆಯನ್ನು ಸುಧಾರಿಸುತ್ತದೆ ಹೊಸ ಮಾಧ್ಯಮಗಳ ಸಹಾಯದಿಂದ ಮಕ್ಕಳಿಗೆ ಪರದೆ ಮೇಲೆ ತೋರಿಸಲಾದ ಸುದ್ದಿಗಳನ್ನು ಓದಿಸುವುದು ಅವಕಾಶ ನೀಡುವುದು ಪ್ರಮುಖ ಘಟನೆಗಳು ತರಗತಿ ಶಾಲೆ ಮತ್ತು ಗ್ರಂಥಾಲಯ ಪುಸ್ತಕಗಳನಾದರಿಸಿ ರಸಪ್ರಶ್ನೆ ಸ್ಪರ್ಧೆಗಳನ್ನು ನಡೆಸುವುದು | ವಾರದಲ್ಲಿ ಎರಡು ಬಾರಿ | ಕನ್ನಡ ಶಿಕ್ಷಕಿ |
| 3 | ಸಾಹಿತ್ಯ ಕೃತಿಗಳು ಮತ್ತು ಬರಹಗಾರರ ಬಗ್ಗೆ ಸಕಾರಾತ್ಮಕ ಮನೋಭಾವವನ್ನು ಬೆಳೆಸುವ ಮೂಲಕ ವಿದ್ಯಾರ್ಥಿಗಳ ಜನಶೀಲ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು | ಸಾಹಿತ್ಯಕ ವ್ಯಕ್ತಿಗಳು ಬರಹಗಾರರು ಮತ್ತು ಕಲಾವಿದರೊಂದಿಗೆ ಸಂದರ್ಶನಗಳು ಮತ್ತು ಚರ್ಚೆ ಆಯೋಜಿಸುವುದು | ತಿಂಗಳಿಗೆ | ಕನ್ನಡ ಶಿಕ್ಷಕಿ |
| 4 | ಕನ್ನಡ ಕಂಪ್ಯೂಟರ್ ಸಾಕ್ಷರತೆಯನ್ನು ಪಡೆದು ಕೊಳ್ಳುವುದು ಮತ್ತು ಸೃಜನಶೀಲಗೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು | ಈ ಕಂಪ್ಯೂಟರ್ ಎಲ್ಲಾ ಮಕ್ಕಳಿಗೆ ಕನ್ನಡ ಕಂಪ್ಯೂಟರ್ ಕೌಶಲ್ಯ ಕೌಶಲ್ಯಗಳನ್ನೆಲ್ಲ ಗಳನ್ನೆಲ್ಲ ತರಗತಿ ನೀಡಲಾಗುತ್ತದೆ ಮತ್ತು ಈ ನಿಯಮಿತ ಕಲಿಕೆಯನ್ನು ಪ್ರಕಟಿಸುವುದು ಎಲ್ಲಾ ವಿದ್ಯಾರ್ಥಿಗಳ ಹೆಸರು ಜನಶೀಲ ಬರಹಗಳನ್ನು ಸೃಜನಶೀಲ ಒಳಗೊಂಡ ಶಾಲಾ ನಿಯತಕಾಲಿಕೆಯನ್ನು ತಯಾರಿಸುವುದು | ವರ್ಷದಲ್ಲಿ ಎರಡು ಬಾರಿ | ಕನ್ನಡ ಶಿಕ್ಷಕಿ |
| 5 | ವಿದ್ಯಾರ್ಥಿಗಳ ಕಲಾತ್ಮಕ ಅಭಿರುಚಿಗಳಗಳನ್ನು ಪೋಷಿಸುವುದು | ಶಾಲಾ ಸಭೆಯಲ್ಲಿ ಪಾಠಗಳಿಗೆ ಸಂಬಂಧಿಸಿದ ಕಿರು ನಾಟಕ ಕಿರು | ವರ್ಷದ ಕೊನೆಯಲ್ಲಿ | ಕನ್ನಡ ಶಿಕ್ಷಕಿ |

GHSS PAIVALIKE

| | | | | |
|---|---|---|---|---|
| | | ಚಿತ್ರಗಳನ್ನು ಪ್ರಸ್ತುತಪಡಿಸಲು ಅವಕಾಶ ಒದಗಿಸುವುದು | | |

GHSS PAIVALIKE

# ಗಣಿತ

| Sl. No | ಉದ್ದೇಶಗಳು | ಚಟುವಟಿಕೆಗಳು | ಸಮಯ | ಜವಾಬ್ದಾರಿ |
|---|---|---|---|---|
| 1 | ಎಲ್ಲಾ ಕಲಿಯುವವರಿಗೆ ಮೂಲಭೂತ ಗಣಿತ ಕಾರ್ಯಾಚರಣೆಗಳನ್ನು ಖಾತ್ರಿಪಡಿಸುವುದು | ***ಗಣಿತ ಕಾರ್ಯಗಾರ ;***ಆಟದ ಮೂಲಕ ಕ್ರಿಯಾಪದಗಳನ್ನು ಬಲಪಡಿಸಲು ಚಟುವಟಿಕೆಗಳನ್ನು ಒದಗಿಸುವುದು ಸಂಖ್ಯಾ ಕಾರ್ಡ್ ,ಮಂಜಟಿಕಾಯಿ ಮಣಿಗಳು ,FLASH ಕಾರ್ಡ್ | JUNE | ಗಣಿತ ಅಧ್ಯಾಪಕರು |
| 2 | ಮೋಜಿನ ಗಣಿತ ಕಲಿಕೆ ಮತ್ತು ಉತ್ತಮ ಮೋಟಾರ್ ಕೌಶಲ್ಯಗಳನ್ನು ಅಭಿವೃದ್ಧಿ | ***ಒರಿಗಾಮಿ ಕಾರ್ಯಗಾರ ;***ಮೂಲಕ ಜಪಾನಿನ ವರಿಗಾಮಿ ಕಲೆಯ ಮೂಲಕ ಗಣಿತ ಕೌಶಲ್ಯಗಳನ್ನು ತರಬೇತಿ ನೀಡುವುದು ವಿವಿಧ ಆಕಾರಗಳನ್ನು ತಯಾರಿ ನಡೆಸುವುದು ಅವುಗಳ ಗಣಿತದ ಗುಣಲಕ್ಷಣಗಳನ್ನು ಆಯೋಜಿಸುವುದು | ವರ್ಷದಲ್ಲಿ ಒಂದು | ಗಣಿತ ಅಧ್ಯಾಪಕರು |
| 3 | ಆಸಕ್ತಿಯನ್ನು ಹೆಚ್ಚಿಸುವುದು ಗಣಿತದ ಅಧ್ಯಯನಕ್ಕಾಗಿ ಆಧುನಿಕ ವೈಜ್ಞಾನಿಕ ಮತ್ತು ತಾಂತ್ರಿಕ ಸಾಮರ್ಥ್ಯಗಳನ್ನು ಬಳಸಿಕೊಳ್ಳಲಾಗುತ್ತದೆ | ಗಣಿತದಲ್ಲಿ ಆಸಕ್ತಿ ಬರಲು ಮಕ್ಕಳಿಗೆ ಇಷ್ಟವಾದ ವಸ್ತುಗಳನ್ನು ತೆಗೆದು ಆರಿಸಿಕೊಂಡು ವಿವರಿಸುವುದು ಸಾಧ್ಯತೆಗಳ ಮೂಲಕ ಐಟಿ ಸಾಮರ್ಥ್ಯಗಳನ್ನು ಬಳಸಿಕೊಂಡು ಮಕ್ಕಳಿಗೆ ಜಾಮಿತಿ ಆಕಾರಗಳು ಚತುರ್ಭುಜಗಳು ಮತ್ತು TANGRAM ಗಳಂತಹ ಚಟುವಟಿಕೆಗಳನ್ನು ಸುಲಭವಾಗಿ ತಲುಪಿಸುವುದು | ತಿಂಗಳಿಗೆ | ಗಣಿತ ಅಧ್ಯಾಪಕರು |
| 4 | ಗಣಿತದಲ್ಲಿ ಹಿಂದುಳಿದಿರುವ ಮಕ್ಕಳನ್ನು ಮುಂಚೂಣಿಗೆ ತರುವುದು | *ಗಣಿತ ಕ್ಲಿನಿಕ್ ;* ಗಣಿತದಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ , ಮುಂಚೂಣಿಯಲ್ಲಿರುವ ಗಣಿತ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಅಗತ್ಯ ಮಾರ್ಗದರ್ಶನ ನೀಡುವುದು | ವಾರಕ್ಕೆ ಒಂದು | |

GHSS PAIVALIKE

| | | | | |
|---|---|---|---|---|
| | | ನ್ಯೂನತೆಗಳನ್ನು ಗುರುತಿಸಿ ಅಗತ್ಯ ಚಟುವಟಿಕೆಗಳನ್ನು ಒದಗಿಸಲಾಗುವುದು | | |
| 5 | ವಿವಿಧ ಸಾಮರ್ಥ್ಯಗಳ ಅಭಿವೃದ್ಧಿ | ದಿನದ ಆಚರಣೆ ಯಿಂದ ಮಾರ್ಚ್ ವರೆಗಿನ ಆಚರಣೆಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಎಸ್ ಆರ್ ಜಿ ವಿನ್ಯಾಸಗೊಳಿಸುವುದು ಅವುಗಳನ್ನು ನಿರ್ದಿಷ್ಟ ದಿನಗಳಲ್ಲಿ ಆಯೋಜಿಸುವುದು | ಅಗತ್ಯವಿರುವಂತೆ | SRG |
| | | | | |

# ENGLISH

| Sl. No | THE GOAL | ACTIVITY | TIME | SUPPORT |
|---|---|---|---|---|
| 1 | Improving the ability to read speak and write English effectively ability to write English without errors. | Assembly conducting two days in a week children have full control of the assembly .write down your daily activities at home and its cool in an English diary. | Throughout the year | English Teacher |
| 2 | To develop creativity | Transforming English lessons into dialogues kit drama conversation story telling and writing. | Once in a month | English Teacher |
| 3 | Development of creative writing skills | The magazine is prepared by children including children writing writing | Once in a three month | English Teacher |
| 4 | Writing excellence in English language | * writing pictures story *special days report<br>*best handwriter | Once in a month | English Teacher |
| 5 | To develop reading skills | *Arranged the library book *set to the reading materials cards | JUNE to MARCH | English Teacher |
| 6 | To active level of fluency in speaking and writing skills to views | Reading competition writing competition presentation of other | MARCH 2026 | SRG,HM,CPTA,English |

GHS PAIVALIKE

| | | | | |
|---|---|---|---|---|
| | confidence in handling the English language | creative activity | | Teacher |

GHSS PAIVALIKE

# ವಿಜ್ಞಾನ

| Sl.No | ಉದ್ದೇಶಗಳು | ಚಟುವಟಿಕೆಗಳು | ಸಮಯ | ಜವಾಬ್ದಾರಿ | |
|---|---|---|---|---|---|
| 1 | ಸ್ವಉದ್ಯೋಗ | ಸಾಬೂನು ತಯಾರಿ | ಪಠ್ಯ ಭಾಗಕ್ಕೆ ಅನುಗುಣವಾಗಿ | ವಿಜ್ಞಾನ ಶಿಕ್ಷಕರು | |
| 2 | Vertical Farming | ಶಾಲಾ ಪರಿಸರದಲ್ಲಿ ವರ್ಟಿಕಲ್ ಫಾರ್ಮಿನ ನಡೆಸುವುದು | ನಿರಂತರ | ವಿಜ್ಞಾನ ಶಿಕ್ಷಕರು | |
| 3 | ಜೀವಿಗಳ ಆವಾಸ ವ್ಯವಸ್ಥೆ ತಿಳಿಯುವ | ಬಯಲು ಪ್ರವಾಸ ಪರಿಸರ ವೀಕ್ಷಣೆ ವರದಿ ತಯಾರಿ | ಪಠ್ಯ ಭಾಗಕ್ಕೆ ಅನುಗುಣವಾಗಿ | ವಿಜ್ಞಾನ ಶಿಕ್ಷಕರು | |
| 4 | ಕೃತಕ ಬೆಳಕಿನ ತಯಾರಿ | ಎಮರ್ಜೆನ್ಸಿ ಲ್ಯಾಂಪ್ ತಯಾರಿಸುವುದು | | ವಿಜ್ಞಾನ ಶಿಕ್ಷಕರು | |

GHSS PAIVALIKE

# ವಿಜ್ಞಾನ

| Sl.No | ಉದ್ದೇಶಗಳು | ಚಟುವಟಿಕೆಗಳು | ಸಮಯ | ಜವಾಬ್ದಾರಿ | |
|---|---|---|---|---|---|
| 1 | ಸ್ವಉದ್ಯೋಗ | ಸಾಬೂನು ತಯಾರಿ | ಪಠ್ಯ ಭಾಗಕ್ಕೆ ಅನುಗುಣವಾಗಿ | ವಿಜ್ಞಾನ ಶಿಕ್ಷಕರು | |
| 2 | Vertical Farming | ಶಾಲಾ ಪರಿಸರದಲ್ಲಿ ವರ್ಟಿಕಲ್ ಫಾರ್ಮಿನ ನಡೆಸುವುದು | ನಿರಂತರ | ವಿಜ್ಞಾನ ಶಿಕ್ಷಕರು | |
| 3 | ಜೀವಿಗಳ ಆವಾಸ ವ್ಯವಸ್ಥೆ ತಿಳಿಯುವ | ಬಯಲು ಪ್ರವಾಸ ಪರಿಸರ ವೀಕ್ಷಣೆ ವರದಿ ತಯಾರಿ | ಪಠ್ಯ ಭಾಗಕ್ಕೆ ಅನುಗುಣವಾಗಿ | ವಿಜ್ಞಾನ ಶಿಕ್ಷಕರು | |
| 4 | ಕೃತಕ ಬೆಳಕಿನ ತಯಾರಿ | ಎಮರ್ಜೆನ್ಸಿ ಲ್ಯಾಂಪ್ ತಯಾರಿಸುವುದು | | ವಿಜ್ಞಾನ ಶಿಕ್ಷಕರು | |

GHSS PAIVALIKE

GHSS PAIVALIKE

GHSS PAIVALIKE